# ಕರ್ನಾಟಕ ಸರ್ಕಾರ

ಆಯುಕ್ತರ ಕಚೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ: 91-080-22212408
ಫ್ಯಾಕ್ಸ್ : 91-080-22277528

ದಿನಾಂಕ: 17.03.2009

ಸಂಖ್ಯೆ: ತಾಂ.ಆಡಳಿತ.ಸುತ್ತೋಲೆ.14/2008-09

## ಸುತ್ತೋಲೆ

**ವಿಷಯ:** ಭೂದಾಖಲೆಗಳ ಉಪ ನಿರ್ದೇಶಕರುಗಳ ಕಾರ್ಯಸೂಚಿ (Job Chart ) ಬಗ್ಗೆ

★★★

ಇಲಾಖೆಯು ಇತ್ತೀಚಿಗೆ ಹಲವಾರು ಹೊಸ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಹಲವು ಹೊಸ ಕಾರ್ಯಕ್ರಮಗಳನ್ನು ಪಾರಂಪರಿಕ ಪದ್ಧತಿಯನ್ನು ಅನ್ವಯಿಸದೇ ಹೊಸ ವಿದಾನಗಳ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ಬದಲಾದ ಕಾರ್ಯ ವಿಧಾನಗಳ ಮೇರೆಗೆ ಭೂದಾಖಲೆಗಳ ಉಪ ನಿರ್ದೇಶಕರುಗಳು ಕರ್ತವ್ಯ ನಿರ್ವಹಣೆಯನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿ ಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಬದಲಾದ ಈ ಪರಿಸ್ಥಿತಿಯಲ್ಲಿ ಈ ಹಿಂದೆ ನೀಡಲಾದ ಕಾರ್ಯಸೂಚಿ ಪಟ್ಟಿಯೊಂದಿಗೆ ಅತ್ಯಂತ ಅದ್ಯತೆ ಮೇರೆಗೆ ನಿರ್ವಹಿಸಬೇಕಾದ ಕರ್ತವ್ಯಗಳ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಒದಗಿಸಲಾಗಿದೆ. ಭೂದಾಖಲೆಗಳ ಉಪ ನಿರ್ದೇಶಕರುಗಳು ಇನ್ನು ಮುಂದೆ ಈ ಪತ್ರದೊಂದಿಗೆ ಒದಗಿಸಿರುವ ಪಟ್ಟಿಯಲ್ಲಿರುವ ಕಾರ್ಯಗಳನ್ನು ತಪ್ಪದೇ ನಿರ್ವಹಿಸುವುದು. ತಾವು ನಿರ್ವಹಿಸಿದ ಕೆಲಸಗಳನ್ನು ಲಗತ್ತಿಸಿರುವ ನಮೂನೆಗಳಲ್ಲಿ ವಿವರಗಳನ್ನು ದಾಖಲು ಮಾಡಿ ಪ್ರತಿ ಶನಿವಾರ ಸಂಜೆ ಆಯುಕ್ತರಿಗೆ ಇ-ಮೇಲ್ ಮುಖಾಂತರ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ತಪ್ಪದೇ ಕಳುಹಿಸಲು ಸೂಚಿಸಿದೆ. ಮ್ಯುಟೇಷನ್ ಪೂರ್ವ ನಕ್ಷೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ನಿಗದಿತ ನಮೂನೆ ಮೂಲಕ ಸಲ್ಲಿಸಲು ಪ್ರತ್ಯೇಕ ಸೂಚನೆ ನೀಡಲಾಗಿದೆ. ಕರ್ತವ್ಯ ನಿರ್ವಹಣಾ ವರದಿಯನ್ನು ಫ್ಯಾಕ್ಸ್ ಅಥವಾ ಅಂಚೆ ಮೂಲಕ ಕಳುಹಿಸಿದರೆ ಅದನ್ನು ಪರಿಗಣಿಸಲಾಗುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ.

**ಇ-ಮೇಲ್ ವಿಳಾಸಗಳು**

1) rajeevchawlaias@gmail.com
2) rudresha-kv@yahoo.co.in
3) ddcs-sslr@karnataka.gov.in
4) enqocs1-sslr@karnataka.gov.in
5) cn-sreedhara@yahoo.co.in
6) cnsreedhara@gmail.com

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು.

17-3-9

4/4/09

35/09-10

4/4/09